ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು**

ವಿಷಯ: ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ/ಬಿ.ಎಡ್/ಚಿತ್ರಕಲಾ ಕಾಲೇಜುಗಳಲ್ಲಿ 2022-23ನೇ ಸಾಲಿನ ಹಾಗೂ ಹಿಂದಿನ ಸಾಲುಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಗಳಿಕೆ ರಜೆ ನಗದೀಕರಣ (TBL) ಸೌಲಭ್ಯಕ್ಕೆ ಅನುದಾನವನ್ನು ಪಿ.ಡಿ ಖಾತೆಯಿಂದ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ:ಇಡಿ:162:2021 ದಿನಾಂಕ:16.12.2022
2.ಸರ್ಕಾರದ ಆದೇಶ ಸಂಖ್ಯೆ:ಆಇ 53 ಟಿಎಆರ್2022 ದಿನಾಂಕ:19.01.2023

*****

**ಪ್ರಸ್ತಾವನೆ,**

ಕಾಲೇಜು ಶಿಕ್ಷಣ ಇಲಾಖೆಯ ಆರು ಪ್ರಾದೇಶಿಕ ಜಂಟಿ ನಿರ್ದೇಶಕರುಗಳು 2022-23ನೇ ಸಾಲಿನಲ್ಲಿ ಹಾಗೂ ಹಿಂದಿನ ಸಾಲುಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ ಸಿಬ್ಬಂದಿಗಳ ಗಳಿಕೆ ರಜೆ ನಗದೀಕರಣ ಸೌಲಭ್ಯಕ್ಕೆ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಅದರಂತೆ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಆರ್ಥಿಕ ಇಲಾಖೆಯ(ವೆಚ್ಚ-8)ಯ ಟಿಪ್ಪಣಿ ಸಂಖ್ಯೆ: ಆಇ 46 ವೆಚ್ಚ-8/2022 ದಿನಾಂಕ:09.12.2022ರ ಸಹಮತಿಯಂತೆ ಉಲ್ಲೇಖ (01)ರ ಸರ್ಕಾರದ ಪತ್ರದಲ್ಲಿ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪದವಿ ಹಾಗೂ ಬಿ,ಎಡ್ ಕಾಲೇಜುಗಳ ಬೋಧಕರುಗಳಿಗೆ ಮತ್ತು ಬೋಧಕೇತರರುಗಳಿಗೆ 2021-22ನೇ ಸಾಲಿನ ಪೂರಕ ಅಂದಾಜು-3ರಲ್ಲಿ ಒದಗಿಸಿರುವ ರೂ.454.69 ಕೋಟಿಗಳಲ್ಲಿ TBL ಸಂಬಂಧದ ಕ್ಲೇಮ್ ಗಳನ್ನು ಇತ್ಯರ್ಥಪಡಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ.

ಉಲ್ಲೇಖ(02)ರ ಸರ್ಕಾರದ ಆದೇಶದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಹೆಸರಿನಲ್ಲಿ ತೆರೆದಿರುವ ಪಿಡಿ ಖಾತೆ ಲೆಕ್ಕಶೀರ್ಷಿಕೆ "8443-00-106-0-18-679"ಯನ್ನು ದಿನಾಂಕ:31.03.2023ರ ವರೆಗೆ ಮುಂದುವರೆಸಿ ಅನುದಾನ ಬಳಕೆ ಮಾಡಲು ಅನುಮತಿ ನೀಡಲಾಗಿದೆ.

ಪ್ರಸ್ತುತ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ ಸಿಬ್ಬಂದಿಗಳಿಗೆ ಅಂತಿಮ ಗಳಿಕೆ ರಜೆಗಳನ್ನು ನಗದೀಕರಿಸಿ ಪಾವತಿಸಲು ಅವಶ್ಯವಿರುವ ಅನುದಾನವನ್ನು ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳ ಮೂಲಕ ಪಾವತಿಸಲು ಅನುದಾನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ : DCE/BUD/GBR/1/2022, E-971252 ದಿನಾಂಕ: 15.02.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ ಇವರ ಹೆಸರಿನಲ್ಲಿರುವ ಪಿ.ಡಿ ಖಾತೆ ಲೆಕ್ಕಶೀರ್ಷಿಕೆ 8443-00-106-0-18-679 ರಡಿಯಲ್ಲಿ ಲಭ್ಯವಿರುವ ಮೊತ್ತದಲ್ಲಿ ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ/ಬಿ.ಎಡ್/ಚಿತ್ರಕಲಾ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುವ ಸಿಬ್ಬಂದಿಗಳಿಗೆ ನಿವೃತ್ತಿ ನಂತರದ ಅಂತಿಮ ಗಳಿಕೆ ರಜೆಗಳನ್ನು ನಗದೀಕರಿಸಿ ಪಾವತಿಸಲು ಸರ್ಕಾರದ ಅನುಮತಿ ನೀಡಲಾಗಿದೆ. ಅದರಂತೆ ಜಂಟಿ ನಿರ್ದೇಶಕರ ಕಛೇರಿ ಹಂತದಲ್ಲಿ ಡಿಸೆಂಬರ್-2022ರ ವರೆಗೆ ಅನುಮೋದನೆಗೊಂಡಿರುವ ಗಳಿಕೆ ರಜೆ ನಗದೀಕರಣದ ಬಿಲ್ಲುಗಳನ್ನು ಪಾವತಿಸುವ ಸಂಬಂಧ ಅನುದಾನವನ್ನು ಪಿ.ಡಿ ಖಾತೆಯಿಂದ ಸೆಳೆದು ಈ ಕೆಳಕಂಡ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಅನುದಾನ ಬಿಡುಗಡೆ ಮಾಡಲು ಅನುಮತಿ ನೀಡಿ ಆದೇಶಿಸಿದೆ.

(ರೂಪಾಯಿಗಳಲ್ಲಿ)

| ಕ್ರ.ಸಂ | ಕೇಂದ್ರ/ಪ್ರಾದೇಶಿಕ ಕಛೇರಿ ವಿವರ | ಡಿಡಿಓ ಸಂಖ್ಯೆ | ಬಿಡುಗಡೆ ಮಾಡಿರುವ ಅನುದಾನ | ಷರಾ |
|---|---|---|---|---|
| 01. | ಜಂಟಿ ನಿರ್ದೇಶಕರು ಪ್ರಾ.ಕ. ಬೆಂಗಳೂರು | 18046-O | 16,31,22,383-00 | ಜಂಟಿ ನಿರ್ದೇಶಕರ ಕಛೇರಿ ಹಂತದಲ್ಲಿ ಡಿಸೆಂಬರ್-2022ರ ವರೆಗೆ ಅನುಮೋದನೆಗೊಂಡಿರುವ ನಿವೃತ್ತಿ ನಂತರದ ಅಂತಿಮ ಗಳಿಕೆ ರಜೆ ನಗದೀಕರಣದ ಬಿಲ್ಲುಗಳನ್ನು ಪಾವತಿಸಲು |
| 02. | ಜಂಟಿ ನಿರ್ದೇಶಕರು ಪ್ರಾ.ಕ. ಮೈಸೂರು | 18050-O | 7,73,36,591-00 | |
| 03. | ಜಂಟಿ ನಿರ್ದೇಶಕರು ಪ್ರಾ.ಕ. ಮಂಗಳೂರು | 18078-O | 3,44,05,236-00 | |
| 04. | ಜಂಟಿ ನಿರ್ದೇಶಕರು ಪ್ರಾ.ಕ. ಧಾರವಾಡ | 18089-O | 19,04,05,092-00 | |
| | | ಒಟ್ಟು ಮೊತ್ತ ರೂ | **46,52,69,302-00** | |

(ಒಟ್ಟು ಮೊತ್ತ ರೂ. ನಲವತ್ತಾರು ಕೋಟಿ ಐವತ್ತೆರಡು ಲಕ್ಷದ ಅರವತ್ತೊಂಬತ್ತು ಸಾವಿರದ ಮೂರುನೂರ ಎರಡು ರೂಪಾಯಿಗಳು ಮಾತ್ರ)

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಈ-ಆಫೀಸ್ ಮೂಲಕ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು.**

--2

<u>ಷರತ್ತುಗಳು:</u>

1. ಆರ್ಥಿಕ ಮಿತವ್ಯಯ ಆದೇಶ ಹಾಗೂ ವೆಚ್ಚಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸುವ ಸರ್ಕಾರದ/ಇಲಾಖೆಯ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸುವುದು.
2. ಯಾವ ಉದ್ದೇಶಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು.
3. ಬಳಕೆ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
4. ಅನುದಾನ ತಪ್ಪಾಗಿ ಪಾವತಿಯಾಗಿರುವುದು ಕಂಡುಬಂದಲ್ಲಿ ಅಥವಾ ವ್ಯಪಗತವಾದಲ್ಲಿ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳನ್ನು ಹೊಣೆಗಾರರನ್ನಾಗಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

**ಕಾಲೇಜು ಶಿಕ್ಷಣ ನಿರ್ದೇಶಕರು.**

**ಇವರಿಗೆ,**

1. ಲೆಕ್ಕಾಧಿಕಾರಿಗಳು, ಹಣ ಮತ್ತು ಪಾವತಿ ವಿಭಾಗ ಕಾ.ಶಿ.ಇ ಕೇಂದ್ರ ಕಛೇರಿ, ಬೆಂಗಳೂರು
2. ಖಜಾನಾಧಿಕಾರಿಗಳು ರಾಜ್ಯ ಹುಜೂರ್ ಖಜಾನೆ ಬೆಂಗಳೂರು

ಪ್ರತಿಗಳು:-

1. ಮ್ಯಾನೇಜರ್/ ಅಧೀಕ್ಷಕರು, ಹಣ ಮತ್ತು ಪಾವತಿ ವಿಭಾಗ ಕೇಂದ್ರ ಕಛೇರಿ ಬೆಂಗಳೂರು-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2. ಕಛೇರಿ ಪ್ರತಿ/ ಹೆಚ್ಚಿನ ಪ್ರತಿ